## ಸುದ್ದಿ ಸಂಚಯ

# ಗ್ರಾಮೀಣ ಪ್ರದೇಶಗಳಲ್ಲಿ ವಿವೇಕಾನಂದರ ವೇದಾಂತ ಡಿಂಡಿಮ

### ತಮಿಳು ನಾಡಿನ ಗ್ರಾಮನಿವಾಸಿಗಳಲ್ಲಿ ಜಾಗೃತಿ ಮೂಡಿಸುತ್ತಿರುವ 'ವಿವೇಕ ಮುರಸು' ಕಾರ್ಯಕ್ರಮ

ದೇಶಾದ್ಯಂತ ವ್ಯಾಪಿಸಿರುವ ಶ್ರೀರಾಮಕೃಷ್ಣ ಮಹಾಸಂಘದ ಶಾಖೆಗಳು, ವೈದ್ಯಕೀಯ, ಶೈಕ್ಷಣಿಕ ಪುಸ್ತಕಪ್ರಕಾಶನ ಮುಂತಾದ ಹಲವಾರು ವಿಧದ ಸೇವಾಚಟುವಟಿಕೆಗಳಲ್ಲಿ ತೊಡಗಿದ್ದು, ಉತ್ತಮ ನಾಗರಿಕರನ್ನು ರೂಪಿಸುವಲ್ಲಿ ಮಹತ್ತರ ಪಾತ್ರ ವಹಿಸುತ್ತಿರುವುದು ಸರ್ವವಿದಿತ. ಯುವಕರ ನಿತ್ಯಸ್ಫೂರ್ತಿಯ ಚಿಲುಮೆಯಾದ ಸ್ವಾಮಿ ವಿವೇಕಾನಂದರ ಜೀವನ ಸಂದೇಶವನ್ನು ತಲುಪಿಸುವ ಹಾಗೂ ಯುವಕರಲ್ಲಿ, ವಿದ್ಯಾರ್ಥಿಗಳಲ್ಲಿ ವ್ಯಕ್ತಿತ್ವ ವಿಕಸನಗೊಳಿಸುವ ಉದ್ದೇಶದಿಂದ ಮೈಸೂರಿನ ಶ್ರೀರಾಮಕೃಷ್ಣ ಆಶ್ರಮ ಹಮ್ಮಿಕೊಂಡಿದ್ದ ಸಂಚಾರಿ ಜ್ಞಾನಪ್ರಸಾರ ಕರ್ನಾಟಕದ ಮೂಲೆ ಮೂಲೆಗಳಲ್ಲೂ ಜನಪ್ರಿಯವಾಗಿದೆ. ಈ ಅಭಿಯಾನದ ಸಂಕಲ್ಪದಿಂದ ಪ್ರೇರಿತಗೊಂಡು ಚೆನ್ನೈ, ಮೈಲಾಪುರದ ರಾಮಕೃಷ್ಣ ಮಠವು ವಿವೇಕ ಮುರಸು ಎಂಬ ಯೋಜನೆಯ ಮೂಲಕ ತಮಿಳು ನಾಡಿನ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ತರಬೇತಿ ಶಿಬಿರ, ಸತ್ಸಂಗ, ಆಧ್ಯಾತ್ಮಿಕ ಪ್ರವಚನ, ಚಿತ್ರ ಪ್ರದರ್ಶನ, ಪುಸ್ತಕ ಮಾರಾಟಗಳ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

ಗ್ರಾಮನಿವಾಸಿಗಳಲ್ಲಿ ತಮ್ಮೊಳಗಿನ ಶಕ್ತಿ, ಸಾಮರ್ಥ್ಯಗಳ ಬಗ್ಗೆ ಅರಿವನ್ನು ಮೂಡಿಸುವುದೇ 'ವಿವೇಕಮುರಸು' ವಿನ ಉದ್ದೇಶ. ಕಾರ್ಯಕ್ರಮದ ರೂಪುರೇಷೆಗಳು ಇಂತಿವೆ:

1. ಗ್ರಾಮೀಣ ಯುವಕರಲ್ಲಿ ಆತ್ಮವಿಕಾಸವನ್ನುಂಟುಮಾಡುವ ವ್ಯಕ್ತಿತ್ವ ವಿಕಸನ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ತನ್ಮೂಲಕ ಅವರಲ್ಲಿ ಆತ್ಮವಿಶ್ವಾಸವನ್ನು ಮೂಡಿಸಿ ಸಾಮಾಜಿಕ ಐಕ್ಯತೆಯನ್ನು ಸಾಧಿಸು ವುದು.
2. ವೃತ್ತಿಶಿಕ್ಷಣ ಮತ್ತು ತರಬೇತಿ ಕಾರ್ಯಕ್ರಮಗಳ ಮೂಲಕ ಗ್ರಾಮೀಣ ಯುವಕರಿಗೆ ಸ್ವ-ಉದ್ಯೋಗದ ಅವಕಾಶಗಳನ್ನು ಕಲ್ಪಿಸುವುದು.
3. ಚಲನಚಿತ್ರ, ಆಶ್ರಮದ ವೇದಾಂತ ಸಾಹಿತ್ಯ ಪುಸ್ತಕಗಳ ಮತ್ತು ಚಿತ್ರಪ್ರದರ್ಶನಗಳ ಮೂಲಕ ಭಗವಾನ್ ಶ್ರೀರಾಮಕೃಷ್ಣರ, ಶ್ರೀಮಾತೆ ಶಾರದಾದೇವಿಯರ ಹಾಗೂ ಸ್ವಾಮಿ ವಿವೇಕಾನಂದರ ಜೀವದಾಯಕ ಹಾಗೂ ಚಾರಿತ್ರ್ಯ ಸಂವರ್ಧಕ ಉಪದೇಶಗಳನ್ನು ಚಿತ್ರಿಸುವುದು.

ಗ್ರಾಮೀಣ ಜನರಲ್ಲಿ ಅರಿವನ್ನು ಮೂಡಿಸುವ ಕಾರ್ಯಕ್ರಮಗಳನ್ನು ತಮಿಳುನಾಡಿನ ಹಳ್ಳಿ ಹಳ್ಳಿಗಳಲ್ಲೂ ಒಂದು ಸುಸಜ್ಜಿತವಾದ ಸಂಚಾರಿ ವಾಹನದ ಸಹಾಯದಿಂದ ನಡೆಸಲಾಗುತ್ತಿದೆ. ಚೆನ್ನೈ ರಾಮಕೃಷ್ಣ ಮಠದ ಸನ್ಯಾಸಿಗಳನ್ನೊಳಗೊಂಡಂತೆ ಐದು ಜನರ ಸಿಬ್ಬಂದಿ ಸ್ಥಳೀಯ ಯುವ ಜನತೆ ಹಾಗೂ ಹಿರಿಯರ ಸಹಕಾರದೊಂದಿಗೆ ಈ ಕಾರ್ಯಕ್ರಮಗಳು ನಡೆಯುತ್ತಿವೆ.

ಹಳ್ಳಿ ಹಳ್ಳಿಗಳಲ್ಲೂ ಸುತ್ತುವ ಈ ಸಂಚಾರಿ ವಾಹನದ ಸಹಾಯದಿಂದ ಪ್ರತಿ ತಿಂಗಳಿನ ಮೊದಲ ಮತ್ತು ಮೂರನೆಯ ವಾರಗಳಲ್ಲಿ ಹಳ್ಳಿಯೊಂದರಲ್ಲಿ ಒಂದು ದಿನದ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ. ಕಾರ್ಯಕ್ರಮದ ಸ್ಥೂಲ ವಿವರಗಳು ಇಂತಿವೆ:



ವಿವೇಕ ಮುರಸು ವಾಹನದ ಚಿತ್ರ

**ಪ್ರಾತಃಕಾಲ ಮತ್ತು ಅಪರಾಹ್ನ**

ಸುಪ್ರಭಾತ ಹಾಗು ಸ್ವಾಮಿ ವಿವೇಕಾನಂದರ ಪ್ರತಿಮೆಗೆ ಮಾಲಾರ್ಪಣೆ — ಹಳ್ಳಿಯ ಬೀದಿಗಳಲ್ಲಿ ಮೆರವಣಿಗೆ.

ವ್ಯಕ್ತಿವಿಕಾಸ ಕಾರ್ಯಕ್ರಮದ ಉದ್ಘಾಟನೆ (ಸಾಧ್ಯವಾದರೆ ಒಂದು ಶಾಲೆಯ ಕಟ್ಟಡದಲ್ಲಿ)—ಆತ್ಮವಿಕಾಸದ ಕುರಿತು ಒಂದು ಸಿ.ಡಿ. ಪ್ರದರ್ಶನ.

**ಸಾಯಂಕಾಲ**

ಗ್ರಾಮದ ಪ್ರಮುಖವಾದ ಸ್ಥಳದಲ್ಲಿ ಸಾರ್ವಜನಿಕ ಸಭೆ: ಸ್ವ-ಉದ್ಯೋಗ ಅವಕಾಶಗಳು — ಪ್ರಾಯೋಗಿಕ ಸುಳಿವು.

ದಿವ್ಯತ್ರಯರ ಜೀವನ ಸಂದೇಶಗಳ ಕುರಿತು ಸಿ.ಡಿ.ಪ್ರದರ್ಶನ.

ವಾಸ್ತವವಾಗಿ ಅಲ್ಲಿ ಬಳಸಲಾಗುತ್ತಿರುವ ವಾಹನವು ಬೆಂಗಳೂರಿನಲ್ಲಿ, ಮೈಸೂರು ರಾಮಕೃಷ್ಣ ಆಶ್ರಮದ ಸ್ವಯಂಸೇವಕರ ಮೇಲ್ವಿಚಾರಣೆಯಲ್ಲಿ, ಜ್ಞಾನವಾಹಿನಿ ವಾಹನವನ್ನು ತಯಾರಿಸಿದ ಕಾರ್ಖಾನೆಯಲ್ಲೇ ತಯಾರಾಯಿತು. ೨೦೦೪ನೆಯ ಇಸವಿಯ ಆಗಸ್ಟ್ ತಿಂಗಳಲ್ಲಿ ಪ್ರಾರಂಭವಾದ ಕಾರ್ಯಕ್ರಮಗಳು ತಮಿಳು ನಾಡಿನ 8 ಜಿಲ್ಲೆಗಳಲ್ಲಿ 82 ಸ್ಥಳಗಳಲ್ಲಿ ನಡೆದಿದೆ ಎಂದು ತಿಳಿಸಲು ಸಂತೋಷವಾಗುತ್ತದೆ. ಈ ಸಂದರ್ಭದಲ್ಲಿ 20,000 ವಿದ್ಯಾರ್ಥಿಗಳನ್ನು ಒಳಗೊಂಡ 64 ವಿದ್ಯಾ ಸಂಸ್ಥೆಗಳು ಕಾರ್ಯಕ್ರಮದಲ್ಲಿ ಭಾಗಿಯಾಗಿವೆ. ಸತ್ಸಂಗಗಳು ಮತ್ತು ಚಲನಚಿತ್ರಗಳ ಪ್ರದರ್ಶನಗಳ ಪ್ರಯೋಜನವನ್ನು 10,000 ಗ್ರಾಮಸ್ಥರು ಪಡೆದಿದ್ದಾರೆ. ಹೀಗಾಗಿ ತಮಿಳುನಾಡಿನಲ್ಲಿ ಈ ಕಾರ್ಯಕ್ರಮ ಅತ್ಯಂತ ಯಶಸ್ವಿಯಾಗಿದೆ ಎಂದು ಹೇಳಬಹುದು.

**ಪ್ರಾಯೋಜಕರು**: ಗಾಯತ್ರಿ ಪಬ್ಲಿಸಿಸ್, # 23, 3 ನೇ ಮೇನ್, 2 ನೇ ಕ್ರಾಸ್, ರಾಘವೇಂದ್ರನಗರ, ಜೆ.ಪಿ.ನಗರ, 7 ನೇ ಹಂತ, ಬೆಂಗಳೂರು 560 078